ಶ್ರೀ ಎಂ. ಲಿಂಗಣ್ಣ.—'Costly' ಎಂದರೆ ಎಸ್ಟಿಮೇಟು ಸರಿಯಾಗಿಲ್ಲವೆಂಬ ದೃಷ್ಟಿಯಿಂದ ಬಿಟ್ಟಿದ್ದೀರಾ ಅಥವಾ 900 ಎಕರೆಗಳಿಗೆ 5 ಲಕ್ಷ ಚಿಲ್ಲರೆ ರೂಪಾಯಿಗಳನ್ನು ಖರ್ಚು ಮಾಡುವುದು ಹೆಚ್ಚು ಎಂತಲೇ ?

ಶ್ರೀ ಕಡಿದಾಳ್ ಮಂಜಪ್ಪ.—Costly ಎಂದು ಹೇಳಿ.

ಶ್ರೀ ಎಂ. ಲಿಂಗಣ್ಣ.—ಪುನಃ ಇದನ್ನು ಪರಿಶೀಲನೆ ಮಾಡಿ ಎಸ್ಟಿಮೇಟ್ ಮಾಡುವುದಕ್ಕೆ ಪ್ರಯತ್ನ ಪಟ್ಟಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಪ್ರಯತ್ನ ಮಾಡಲಾಗಿದೆ.

ಶ್ರೀ ಎಂ. ಲಿಂಗಣ್ಣ.—ಅಂದರೆ ಆ ಬಗ್ಗೆ ಎಸ್ಟಿಮೇಟ್ ತಯಾರಾಗಿದೆಯೇ ಅಥವಾ ಯಾವ ಸ್ಟೇಜಿನಲ್ಲಿದೆ ?

ಶ್ರೀ ಕಡಿದಾಳ್ ಮಂಜಪ್ಪ.—8-9-1952ರಲ್ಲಿ ಪುನಃ ಎಸ್ಟಿಮೇಟನ್ನು re-cast ಮಾಡಿ ಕಳುಹಿಸಿ ಬೇಕೆಂದು ಆರ್ಡರ್ ಮಾಡಿದೆ.

ಶ್ರೀ ಎಂ. ಲಿಂಗಣ್ಣ.—ಜನರಿಂದ ಅನೇಕ ಮನವಿಗಳು ಬಂದಿಯೆಂದು ಹೇಳಿದ್ದೀರಿ. ತಾವು ಸರ್ಕಾರಿ ಹುಕುಮನ್ನು ಮುಂದುವರಿಸಿದ್ದರ ಮೇಲೆ ತಾನೆ ಈ ರೀತಿ ಒತ್ತಾಯ ಬಂದದ್ದು ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕಾಗಿಯೇ ಮಾಡಿದ್ದೇವೆ.

The Beggars' Colony.

Q.—185. **Sri M. PALANIYAPPAN** (Ulsoor).—

Will the Government be pleased to state.—

(*a*) the amount spent each year for running the Beggars' Colony ;

(*b*) the actual number of beggars they had from September 1951 to September 1952, each month ;

(*c*) the establishment in the Beggars' Colony,

(*d*) the duration of the period for each Beggar at the colony ?

A.—**Sri Kadidal MANJAPPA** (Minister for Revenue and Public Works).

(*a*)

Year		*Expenditure* Rs.	a.	p
1945-46	...	14,537	0	0
1946-47	...	21,826	0	0
1947-48	...	18,273	10	0
1948-49	...	34,916	13	0
1949-50	...	29,057	14	4
1950-51	...	62,440	6	4
1951-52	...	69,086	14	10

(*b*)

Month		*Average number of beggars detained in the Colony*
September 1951	...	178
October ,,	...	159
November ,,	...	115
December ,,	...	117
January 1952	...	132
February ,,	...	136
March ,,	...	139
April ,,	...	151
May ,,	...	157
June ,,	...	142
July ,,	...	151
August ,,	...	144
September ,,	...	143

(*c*) *Staff working at the Colony.*—

1 One Superintendent
2 One Chief Warder
3 Two Clerks
4 One Tailoring Instructor
5 One Driver
6 Two head Warders
7 Twenty-two Male Warders
9 Five Female Warders
9 Two Cooks
10 Three Peons
11 One Cycle Orderly
12 One Ayah
13 One Barber
14 One Scavanger

Hospital Staff.—

1 One Assistant Surgeon
2 One Compounder
3 One Peon

(*d*) No time-limit is fixed for the detention of beggars in the Colony. The period of detention depends on each individual case.

Sri M. PALANIYAPPAN.—What is the principle with which the Beggars' Colony was started ?

Sri Kadidal MANJAPPA.—To help the beggars to enable them to lead a decent life.

Sri M. PALANIYAPPAN.—Where ?

Sri Kadidal MANJAPPA.—In this world.

Sri M. PALANIYAPPAN.—After starting the Colony, are there no beggars in the City ?

Sri Kadidal MANJAPPA.—The presumption is that there are no beggars.

Sri M. PALANIYAPPAN.—If there are no beggars it is better to close the Colony, is it not?

Sri Kadidal MANJAPPA.—Not in the Colony, but in the City, I said.

Sri M. PALANIYAPPAN.—Has it come to the notice of Government that innocent people, those who are not actually beggars, are taken into the Colony?

Sri Kadidal MANJAPPA.—No.

Sri M. PALANIYAPPAN.—Is it not a fact that people who come from other Provinces are taken to the Colony and kept there for several months?

Sri Kadidal MANJAPPA.—Likely.

Sri M. PALANIYAPPAN.—May I know the reason for doing that?

Sri Kadidal MANJAPPA.—They were begging.

Sri M. PALANIYAPPAN.—There are even cases where people who are not actually begging and who have come for Dasara Festivities, have been taken to the Colony.

Sri Kadidal MANJAPPA.—We do not find pleasure in detaining persons unnecessarily and spending money therefor.

Sri M. PALANIYAPPAN.—Is there any qualification to take a person into the beggars' Colony.

Sri Kadidal MANJAPPA.—His being a beggar is the qualification.

Sri M. PALANIYAPPAN.—What is the qualification for admission into the Colony?

Sri Kadidal MANJAPPA.—One being a beggar is the definite qualification.

Sri M. PALANIYAPPAN.—If he is hale and healthy, do you take him to the Colony or is it necessary that he should be lame or a disabled man?

Sri Kadidal MANJAPPA.—Both disabled and able-bodied are detained.

Sri M. PALANIYAPPAN.—I see that till September 1952 the average is 150 per month. The amount spent in 1951-52 is Rs. 69,986-14-10, about one-third of what was spent in 1946-47. Is it profitable for the Government to continue the Colony any longer?

Sri Kadidal MANJAPPA.—The Colony was not established with the idea of getting any profit.

12-30 P.M.

Sri M. PALANIYAPPAN.—Are there facilities existing in the colony for teaching any vocational subjects for these beggars?

Sri Kadidal MANJAPPA.—The whole scheme requires re-examination and we are considering how best we can help the beggars.

Mr. SPEAKER.—Next question No. 203.

(Many members signified their intention to put more supplementaries on the previous question.

Mr. SPEAKER.—I will just explain. I now see that nearly one-third of the Hon'ble Members are willing to put supplementary questions. I feel that a sufficient number of supplementary questions have been put so far on this question.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ (ಶಿವಮೊಗ್ಗ).—ಬೇರೆ ಯಾರೂ ಕೇಳದ ಪ್ರಶ್ನೆಗಳನ್ನು ಕೇಳುತ್ತೇನೆ.

Mr. SPEAKER.—We have already covered half an hour of the question time.

ಶ್ರೀ ಎಸ್. ಶ್ರೀನಿವಾಸ್ಯಯ್ಯಂಗಾರ್ (ಟಿ.ನರಸೀಪುರ).—ಮುಖ್ಯವಾದ ನಪ್ಲಿಮೆಂಟರಿಗಳು ಇವೆ.

Mr. SPEAKER.—Very well. Sri H. K. Veeranna Gowda.

ಶ್ರೀ ಹೆಚ್. ಕೆ. ವೀರಣ್ಣಗೌಡ (ಮದ್ದೂರು).—69 ಸಾವಿರ ರೂಪಾಯಿ ಚಿಲ್ಲರೆ ಹೋದ ವರ್ಷ ಖರ್ಚು ಮಾಡಿದ್ದೀರಿ ಎಂದು ಹೇಳುತ್ತೀರಿ. ಇದರಲ್ಲಿ 17 ಜನ ಪರಿವಾರದವರ ಖರ್ಚು ಸೇರಿದೆಯೇ, ಅಥವಾ ಎಲ್ಲಾ ಹೆಣವನ್ನೂ 143 ತಿರುಹೆಯುವರಿಗೆ ಖರ್ಚು ಮಾಡಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲಾ ಸೇರಿದೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಇವರ ಸಂಬಳ ಸಾರಿಗೆ ತೆಗೆದುಬಿಟ್ಟು, ಇದರಲ್ಲಿ ಭಿಕ್ಷುಕರಿಗೆ ಮಾತ್ರ ಎಷ್ಟು ಖರ್ಚು ಮಾಡುತ್ತಿದ್ದೀರಿ?

Sri. Kadidal MANJAPPA.—It is a matter of calculation.

ಶ್ರೀ ಎಚ್. ಕೆ. ವೀರಣ್ಣಗೌಡ.—ನೀವು ಸಿಬ್ಬಂದಿಗೆ ಇಷ್ಟು ಖರ್ಚಾಗುತ್ತದೆ ಎಂದು ಇಲ್ಲಿ ಕೊಟ್ಟಿಲ್ಲ. ಆದ್ದರಿಂದರೇ ಭಿಕ್ಷುಕರೊಬ್ಬೊಬ್ಬರಿಗೆ ಎಷ್ಟು ಖರ್ಚು ಬೀಳುತ್ತದೆ ಎಂದು ನಾನು ಕೇಳುತ್ತಾ ಇರುವುದು ?

Sri Kadidal MANJAPPA.—The cost no doubt includes the cost of the establishment. But I cannot give you the exact figure.

ಶ್ರೀ ಕೆ. ಪ್ರಭಾಕರ್ (ನೆಲಮಂಗಲ—ಅನುಸೂಚಿತ ಜಾತಿಗಳು).—ಈ Beggar Colony scheme ಪ್ರಾರಂಭವಾದಲಾಗಾಯಿತು ಎಷ್ಟು ಜನರನ್ನು ತಯಾರು ಮಾಡಿ ಹೊರಗಡೆ ಕಳುಹಿಸಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಎಷ್ಟು ಜನರನ್ನು detain ಮಾಡಿದ್ದೇವೆಂಬುದನ್ನು ಕೊಟ್ಟಿದ್ದೇವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಈ ಸ್ಕೀಮಿನಲ್ಲಿ ಭಿಕ್ಷುಕರನ್ನು ಉದ್ಯೋಗಸ್ಥರನ್ನಾಗಿ ಮಾಡುವುದು ಸೇರಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಈ ಯೋಜನೆಯನ್ನು ಪುನರ್ವಿಮರ್ಶೆ ಮಾಡಬೇಕಾಗಿದೆ. ಇದು ತೃಪ್ತಿಕರವಾಗಿ ನಡೆಯುತ್ತಲಿಲ್ಲವೆಂದು ಸರ್ಕಾರದ ಗಮನಕ್ಕೆ ಬಂದಿದೆ. ಯಾವ ರೀತಿ ಅದನ್ನು ಸರಿಪಡಿಸಬೇಕು, ಯಾವ ರೀತಿ ಭಿಕ್ಷುಕರನ್ನು ನಿರೋಧ ಮಾಡಬೇಕು ಎಂಬುದೇ ನಮ್ಮ ಮುಂದೆ ಇರುವ ಪ್ರಶ್ನೆ.

ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ—ಅನುಸೂಚಿತ ಜಾತಿಗಳು).—ಇದಕ್ಕೆ ಒಂದು Management Committee ಇದೆಯೇ ?

Sri Kadidal MANJAPPA.—I believe so.

ಶ್ರೀ ಎಂ. ಚಿಕ್ಕಲಿಂಗಯ್ಯ.—Chairman ಅವರಿಗೆ ಸಂಬಳ ಕೊಡುತ್ತೀರಿ, ಅಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಹಿಂದೆ ಸಂಬಳ ಕೊಡುವುದಕ್ಕಿಂತ ಮುಂಚೆ Chairman free ಆಗಿ ಕೆಲಸ ಮಾಡುತ್ತಾ ಇದ್ದುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಎಂ ಶಂಕರಲಿಂಗೇಗೌಡ (ನಾಗಮಂಗಲ)—ಈ ವಿಚಾರದಲ್ಲಿ ನಾವು ಏನಾದರೂ Correspondence ಮಾಡಬೇಕಾದರೆ Beggar Minister ಎಂದು ಅಡ್ರೆಸ್ ಹಾಕಬಹುದೇ ?

Mr. SPEAKER.—The Minister need not answer that question also.

ಶ್ರೀ ಎಚ್. ಕೆ. ಸಿದ್ದಯ್ಯ (ಬೇಲೂರು—ಅನುಸೂಚಿತ ಜಾತಿಗಳು).—ಭಿಕ್ಷುಕರು ಮನುಷ್ಯರು ಅಲ್ಲವೇ ?

Mr. SPEAKER.—The Minister need not answer that question also.

Sri D. VENKATESH (Gandhinagar)—Are the Government aware that all the beggars who were taken to Beggars' Colony on the previous day are distributed in the town in the next morning and allowed to go on begging and some remuneration got from them by the officers concerned ?

Sri Kadidal MANJAPPA.—I will investigate the matter.

Sri D. VENKATESH.—Is it a fact that some of the Dasiahs who are accustomed to go about the City are asked not to do so and is it true that some other persons who go and take their food in some other's house are also taken to the Beggars' Colony ?

Sri. Kadidal MANJAPPA.—I have no information.

Sri D. VENKATESH.—If such instances are brought to the notice, will the Government take action ?

Sri Kadidal MANJAPPA.—Certainly.

ಶ್ರೀ ವಿ. ಆರ್. ನಾಯ್ಡು (ಮಲ್ಲೇಶ್ವರಂ).—ಬೆಂಗಳೂರು ನಗರದಲ್ಲಿ ಕಾಫಿ ಬಚ್ಚೆ ಹಾಕಿಕೊಂಡು ಹೋಗುವುದಕ್ಕೆ ಸಾಧ್ಯವೇ ಇಲ್ಲ. ಕಾಫಿ ಬಚ್ಚೆ ಹಾಕಿದರೆ ಭಿಕ್ಷುಕರೆಂದು ಭಾವನೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಕಾಫಿಬಚ್ಚೆ ಹಾಕಿರುವವರು ಭಿಕ್ಷುಕರಾಗುವುದಿಲ್ಲ.

ಶ್ರೀ ವಿ. ಆರ್. ನಾಯ್ಡು.—ಅಂಥ ಅನೇಕ ದೂರುಗಳು ಬಂದಿಲ್ಲವೇ ? ಕಾಫಿ ಬಚ್ಚೆ ಹಾಕಿಕೊಂಡು ಹೋಗುವುದೇ ಕಷ್ಟವಾಗಿದೆ. ಅಂಥ ಕಷ್ಟ ಸರ್ಕಾರದ ಗಮನಕ್ಕೆ ಬಂದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಇಮುವರೆಗೆ ಅಂಥ ದೂರುಗಳು ಬಂದಿಲ್ಲ.

Sri V. R. NAIDU.—Will they consider the closing down of the colony, as early as possible ?

Sri Kadidal MANJAPPA.—I have already said that we are considering the whole question afresh.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಈ Colony ಪ್ರಾರಂಭ ಮಾಡುವುದಕ್ಕೆ ಮುಂಚೆ ಭಿಕ್ಷುಕರ ಸಂಖ್ಯೆಯನ್ನು ಸರ್ವೆ ಮಾಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಮಾಡಿತ್ತು.

ಶ್ರೀ ಬಿ. ಹುಚ್ಚೇಗೌಡ.—ಆ ಸರ್ವೆಯ ಪ್ರಕಾರ ಎಷ್ಟು ಜನ ಭಿಕ್ಷುಕರು ಇದ್ದರು ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಬಿ. ಹುಚ್ಚೇಗೌಡ.—ಆರು ಸಾವಿರ ಎಂದು ಕಂಡು ಬಂದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಜ್ಞಾಪಕವಿಲ್ಲ.

ಶ್ರೀ ಬಿ. ಹುಚ್ಚೇಗೌಡ.—6,000 ಭಿಕ್ಷುಕರ ಜಾಗೆಕಿ 150 ಜನ ಮಾತ್ರ ನಿಮ್ಮ ಕಾಲೊನಿಯಲ್ಲಿ ಹಿಡಿದು ತಂದಿಡಲು ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ವರ್ಷೇ ವರ್ಷೇ ಅವರ ಸಂಖ್ಯೆ ಕಡಮೆಯಾಗಿರಬಹುದು.

ಶ್ರೀ ಬಿ. ಹುಚ್ಚೇಗೌಡ.—ಹಾಗಾದರೆ 150 ಜನಕ್ಕಿಂತ ಮೇಲೆ ಭಿಕ್ಷುಕರು ಇಲ್ಲ ಎಂದು ತಾವು ಭರವಸೆ ಕೊಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಮೈಸೂರು ಸಂಸ್ಥಾನದಲ್ಲಿ ಬೇರೆ ಕಡೆ ಇದ್ದಾರೆ.

ಶ್ರೀ ಬಿ. ಹುಚ್ಚೇಗೌಡ.—ಸಂಸ್ಥಾನದ ಬೇರೆ ಕಡೆಗಳಿಗೆ ಭಿಕ್ಷುಕರಿಗೆ ಸಂಬಂಧಪಟ್ಟ ಕಾನೂನು ಅನ್ವಯಿಸುವುದಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಬೇರೆ ಕಡೆ ಭಿಕ್ಷುಕರು ಬೇರೆ ಕಡೆ ಇರಬಹುದು. ಬೆಂಗಳೂರು ಬಿಟ್ಟು ಬೇರೆ ಕಡೆಗೂ ಭಿಕ್ಷುಕ ವೃತ್ತಿಗೆ ಹೋಗಬಹುದು.

ಶ್ರೀ ಬಿ. ಹುಚ್ಚೇಗೌಡ.—ಕಾಲೊನಿ ತೆರೆದಿರುವುದು ಬೆಂಗಳೂರಿಗೆ ಮಾತ್ರವೇ? Let it be made clear.

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್. Jurisdiction ಯಾವ area ಕ್ಕೆ ಎಂದು ನೋಡಿ ಹೇಳಬೇಕು. ತಕ್ಷಣ ಹೇಳುವುದಕ್ಕಾಗುವುದಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ಈ ಕಾಲೊನಿ ಮೈಸೂರು ಸ್ಟೇಟಗೋಸ್ಕರ ತೆರೆದಿರುವುದಲ್ಲವೇ?

Mr. SPEAKER.—The Minister has already replied that he wants notice. Any other supplementary?

ಶ್ರೀ ಬಿ. ಹುಚ್ಚೇಗೌಡ.—ಹಾಗಾದರೆ 143 ಭಿಕ್ಷುಕರಿಗೋಸ್ಕರ 47 ಜನ ಸಿಬ್ಬಂದಿ ಅವಶ್ಯಕತೆ ಇದೆಯೇ?

Sri Kadidal MANJAPPA.—It is a matter of opinion.

ಶ್ರೀ ಬಿ. ಹುಚ್ಚೇಗೌಡ.—ಜಾಡಮಾಲಿ, ನಾಯಿಂದ .....

Mr. SPEAKER.—The Member need not read the personnel of the establishment.

ಶ್ರೀ ಬಿ. ಹುಚ್ಚೇಗೌಡ.—I will make myself clear. ಭಿಕ್ಷುಕರ ಪೈಕಿ ಯಾರಿಂದಲಾದರೂ ಇಂಥ ಕೆಲಸ ಮಾಡಿಸುವುದಕ್ಕೆ ಅಸ್ಪದವಿಲ್ಲವೇ? ಈ ಕೆಲಸಗಳನ್ನೆಲ್ಲಾ ಮಾಡುವುದಕ್ಕೂ ಸಿಬ್ಬಂದಿಗಳನ್ನು ನೇಮಕ ಮಾಡಬೇಕೇ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಪರಿಶೀಲನೆ ಮಾಡುತ್ತೇವೆ.

A MEMBER.—May I ask whether the Government have no intention of taking measures to remove beggar nuisance in places other than the City of Bangalore?

Sri Kadidal MANJAPPA.—We intend taking some action.

ಶ್ರೀ ಆರ್. ಅನಂತರಾಮನ್ (ಚಾಮರಾಜಪೇಟೆ)—ಸ್ಥಳೀಯ ಸಂಸ್ಥೆಗಳಿಂದ ಈ ಬಾಬಿನ ಖರ್ಚಿಗಾಗಿ ಎಷ್ಟು ಹಣ ವಸೂಲು ಮಾಡುತ್ತೀರಿ?

Sri Kadidal MANJAPPA.—Notice.

ಶ್ರೀ ಆರ್. ಅನಂತರಾಮನ್.—ರಾತ್ರಿ ಹೊತ್ತು ಭಿಕ್ಷುಕರ ಕಾಟವನ್ನು ತಪ್ಪಿಸುವುದಕ್ಕೆ ಏನು ಕಾರ್ಯಕ್ರಮ ಕೈಕೊಂಡಿದ್ದೀರಿ?

(ಉತ್ತರವಿಲ್ಲ.)

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಆಹಾರದ ಪರಿಹಾರದ ಸ್ಥಿತಿ ಬಿಗಡಾಯಿಸಿರುವುದರಿಂದ ಭಿಕ್ಷುಕರ ಹಾವಳಿ ಹೆಚ್ಚಾಗಿರುವುದು ಎಂದು ಸರ್ಕಾರದವರು ತಿಳಿದುಕೊಂಡಿದ್ದಾರೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು, ಮದ್ರಾಸ್ ಪ್ರಾಂತದ ಕಡೆಯಿಂದ ಅನೇಕ ಜನ ಬರುತ್ತಾರೆ.

ಶ್ರೀ ಎಸ್. ಸಿದ್ದಪ್ಪ.—ಅದಕ್ಕೆ ಏನಾದರೂ ಕಾರ್ಯತೆಗೆದುಕೊಂಡಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ರಾಜ್ಯಾಂಗದ ಪ್ರಕಾರ ಮದ್ರಾಸಿನಿಂದ ಬರತಕ್ಕವರನ್ನು ನಿಷೇಧಿಸುವುದಕ್ಕೆ ಆಗುವುದಿಲ್ಲ.

ಶ್ರೀ ಬಿ. ಎಂ. ಶೀನಪ್ಪ (ಕಬ್ಬನ್‌ಪೇಟೆ).—ಮೈಸೂರಿನ ಹೊರಗಡೆಯಿಂದ ಬಂದಿರತಕ್ಕವರು agents ಆಗಿದ್ದುಕೊಂಡು ಲೈಸೆನ್ಸಿಲ್ಲದೆ ಗುಡಿಸಲುಗಳನ್ನು ಕಟ್ಟಿ ಭಿಕ್ಷುಕ ವೃತ್ತಿಯಿಂದ ಇರುವವರಿಗೆ ಅವುಗಳನ್ನು ಬಾಡಿಗೆಗೆ ಕೊಟ್ಟು ಬಾಡಿಗೆ ವಸೂಲು ಮಾಡುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಬೆಂಗಳೂರು ಕೌನ್ಸಿಲ್ಲರುಗಳಿಗೆ ಅದು ಚೆನ್ನಾಗಿ ಗೊತ್ತಿರಬೇಕು.

ಶ್ರೀ ಬಿ. ಎಂ. ಶೀನಪ್ಪ.—ತಮಗೆ ಗೊತ್ತಿದೆಯೇ?

ಅಧ್ಯಕ್ಷರು.—ಅದು ಸರ್ಕಾರದವರಿಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಬೇರೆ ಪ್ರಶ್ನೆ ಕೇಳಿ.

ಶ್ರೀ ಬಿ. ಎಮ್. ಶೀನಪ್ಪ.—ಭಿಕ್ಷೆ ಮಾಡುವುದಿಲ್ಲ ಎಂದು ಹೇಳಿ ಬಿಟ್ಟು ವಾಪಸು ಬಂದು ಪುನಃ ಭಿಕ್ಷೆ ಬೇಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಅಧ್ಯಕ್ಷರು.—ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ಹೇಳುತ್ತಾರೆ.

ಶ್ರೀ ಕೆ. ಪುಟ್ಟಸ್ವಾಮಿ (ಶ್ರೀರಂಗ ಪಟ್ಟಣ).—ಒಬ್ಬಿ ಭಿಕ್ಷುಕ Beggar colony ಯಲ್ಲಿ ಎಷ್ಟು ದಿವಸ ಇರುತ್ತಾನೆ?

ಶ್ರೀ ಕಡಿದಾಳ್ ಮಂಜಪ್ಪ.—ಎಷ್ಟು ಕಾಲ ಅವರನ್ನು ಇಟ್ಟುಕೊಳ್ಳಬೇಕೋ ಅಷ್ಟು ಕಾಲ ಇಟ್ಟುಕೊಳ್ಳುತ್ತೇವೆ.

ಶ್ರೀ ಕೆ. ಪುಟ್ಟಸ್ವಾಮಿ.—ಅಷ್ಟು ಕಾಲ ಇಟ್ಟುಕೊಂಡ ನಂತರ ಭಿಕ್ಷ ಬೇಡುವುದಿಲ್ಲವೇ? ಕಾಲ ನಿರ್ದಿಷ್ಟ ಮಾಡಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಭಿಕ್ಷುಕ ದುರಸ್ತು ಆದ ತಕ್ಷಣ ಬಿಟ್ಟುಬಿಡುತ್ತೇವೆ.

ಶ್ರೀ ಕೆ. ಪುಟ್ಟಸ್ವಾಮಿ.—ಭಿಕ್ಷ ಮಾಡುತ್ತೇನೆಂದು ಹೇಳಿದರೆ, ಅಲ್ಲೇ ಇಟ್ಟುಕೊಂಡು ಕಾಪಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಆದಷ್ಟು ಜಾಗ್ರತೆ ಕಳುಹಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಪುಟ್ಟಸ್ವಾಮಿ.—ಅವನನ್ನು ಕಳುಹಿಸಿಕೊಡುವುದು ಯಾವಾಗ?

ಶ್ರೀ ಕಡಿದಾಳ್ ಮಂಜಪ್ಪ.—ಸ್ವತಂತ್ರವಾಗಿ ಜೀವನ ಮಾಡುವುದಕ್ಕೆ ಆತನಿಗೆ ಸರಿಯಾದ ಮನೋಭಾವ ಬಂದಿದೆ ಎಂದು ತಿಳಿದು ಬಂದ ಮೇಲೆ ಕಳುಹಿಸಿಕೊಡುತ್ತೇವೆ.

ಶ್ರೀ ಕೆ. ಪುಟ್ಟಸ್ವಾಮಿ.—ತಾವು Beggars' colony ಗೆ ಹೋಗಿ ನೋಡಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ನೋಡಿದ್ದೇನೆ.

Sri K. PUTTASWAMY.—Is it not quite attractive for any of us?

Sri Kadidal MANJAPPA.—The suggestion will be borne in mind.